ಅವಳನ್ನು ಕಂಡಾಗ ಹೃದಯವೇ ಬಾಯಿಗೆ ಬಂದಂತಾಯಿತು. ಯಾವನೋ ವಿಕೃತ ಕಾಮಿ ಹಿಂದಿನ ರಾತ್ರಿ ಅವಳ ಮೇಲೆ ಆಕ್ರಮಣಕಾರಿ ದಾಳಿ ಮಾಡಿ ತನ್ನ ಕಾಮದಾಹ ತೀರಿಸಿಕೊಂಡ ಕೊನೆಯ ಉದ್ರಿ ಗಿರಾಕಿಯಾಗಿದ್ದ. ತನ್ನ ಕಾಮದಾಹ ತೀರಿಸಿಕೊಳ್ಳುವ ಭರದಲ್ಲಿ ಸಿಕ್ಕ ಸಿಕ್ಕಲ್ಲಿ ಗಾಯ ಮಾಡಿ ಹಿಂಸಿಸಿದ್ದ ಅನಾಗರಿಕ ಪಶು. ಅ ಆಗಂತುಕ ಯಾರೆಂಬುದೇ ನಮ್ಮೆಲ್ಲರ ಯಕ್ಷ ಪ್ರಶ್ನೆಯಾಗಿತ್ತು. ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಸಾಗಿಸಿದರೂ ಅವಳನ್ನುಳಿಸಿಕೊಳ್ಳಲಾಗದೇ ಆಸ್ಪತ್ರೆಯಿಂದ ಅವಳ ಕಳೆಬರವನ್ನು ತಂದು ಸತ್ತ ಮಂಗನಿಗೆ ಮಾನವೀಯತೆ ದೃಷ್ಟಿಯಿಂದ ಅಂತ್ಯ ಸಂಸ್ಕಾರ ಮಾಡುವಂತೆ ಅವಳ ಅನಾಥ ಬದುಕಿನೊಂದು ಅಂತ್ಯಸಂಸ್ಕಾರ ಮಾಡಿದಾಗ ಎಲ್ಲರಿಗೂ ಒಂಥರಾ ಸ್ವಯಂ ಧನ್ಯತಾ ಭಾವ. ನನಗಂತೂ ಆ ಇಡೀ ದಿವಸ ಅವಳ ನೆನಪುಗಳು ಸುರಳಿಸುರಳಿಯಾಗಿ ಅಮರಿಕೊಂಡವು. ನಾನು ಆ ಘಟಕಕ್ಕೆ ಹಾಜರಾದ ಆರಂಭದ ದಿನದಿಂದ ಅವಳನ್ನ ಗಮನಿಸುತ್ತಿದ್ದ ಹಸಿಹಸಿಯಾದ ಹಸಿರಾದ ನೆನಪು ಹಾಗೂ ಅವಳ ಸುತ್ತ ಅವಳಿಗಾಗಿ ಅವಳ ಹಸಿ ಮಾಂಸಕ್ಕಾಗಿ ಕಾದ ರಣ ಹದ್ದುಗಳ ಚಿತ್ರಣವು ನನ್ನ ಮನದ ಸ್ಮತಿ ಪಟಲದಿಂದ ಸುಳಿ ಸುಳಿಯಾಗಿ ಸುಳಿದಾಡಿದವು.

ಆ ಬಸ್ ಘಟಕಕ್ಕೆ ಹಾಜರಾದ ಮೊದಲ ದಿನದ ಆರಂಭದಲ್ಲಿಯೇ ಹೊರ ಆವರಣದ ಗೋಡೆಗೆ ಆತುಕೊಂಡು ನಿರ್ಭಾವುಕ ನೋಟದಿಂದ ಎತ್ತಲೋ ನೋಡುತ್ತಿದ್ದ ಅವಳನ್ನು ನಾನು ಗುರುತಿಸಿದೆ. ಹೊರ ಜಗತ್ತು ಅವಳನ್ನು ಹುಚ್ಚಿ ಎಂದು ಪರಿಗಣಿಸಿಯೇ ಬಿಟ್ಟಿದ್ದರು. ಅವಳಂತರಂಗ ಕೆದಕುವ ಕುತೂಹಲಿಯಾಗಿ ಆ ಕ್ಷಣಕ್ಕೆ ನಾನವಳಿಗಿಟ್ಟ ಹೆಸರು ಮಾನಸಿ. ಅಂದು ನಾನು ನನ್ನ ಕರ್ತವ್ಯ ನಿರ್ವಹಿಸಿ ಹೊರ ನಡೆದಾಗ ಮತ್ತೆ ಅವಳನ್ನು ಗಮನಿಸಿದೆ. ಆಳವಾದ ನೋವನ್ನನುಭವಿಸಿದಂತೆ ನನಗವಳು ಕಂಡಳು. ಕೆಲವೇ ದಿವಸಗಳ ಹಿಂದೆಯಷ್ಟೇ ಈ ಘಟಕಕ್ಕೆ ವರ್ಗವಾದ ನನ್ನೊಂದಿಗೆ ಇನ್ನೂ ನನ್ನ ಕುಟುಂಬದ ಸದಸ್ಯರು ಬಂದಿರದ ಕಾರಣ ಒಬ್ಬಂಟಿಯಾದ ನನಗೆ ಈ ರೀತಿಯ ಮಾನಸಿಕ ಅಸ್ವಸ್ಥ ಮನಸ್ಸಿನ ಇಂತಹ ವ್ಯಕ್ತಿಗಳ ಬಗ್ಗೆ ಚಿಂತಿಸಲು, ಗಮನಿಸಲು ಹೆಚ್ಚಿನ ಸಮಯಾವಕಾಶ ದೊರೆತಿತ್ತು. ಮರುದಿನ ಘಟಕಕ್ಕೆ ತೆರಳಿ ಎಂದಿನಂತೆ ಕಾರ್ಯನಿರತನಾದಾಗ ಅವಳ ಬಗ್ಗೆಯೇ ಎಲ್ಲರಿಂದ ವಿಷಯ ತಿಳಿದುಕೊಂಡೆ. ಅದರಿಂದ ನನಗೆ ತಿಳಿದದ್ದು ಇಷ್ಟೇ. ಸುಮಾರು ಆರೇಳು ವರ್ಷದಿಂದ ಎಲ್ಲಿಂದಲೋ ಬಂದು ಬಸ್ ಘಟಕದ ಆವರಣದಲ್ಲಿ ಕಾಣಿಸಿಕೊಂಡ ಅವಳ ಹಿನ್ನೆಲೆ, ಮುನ್ನಲೆ ಯಾವುದು ಎತ್ತ ಎಂದು ಅಲ್ಲಿದ್ದವರ್‍ಯಾರಿಗೂ ತಿಳಿದಿರಲಿಲ್ಲ, ತಿಳಿದುಕೊಳ್ಳಲು ಯಾರೂ ಪ್ರಯತ್ನಿಸಿಯೂ ಇಲ್ಲ. ಆದರೆ, ಆ ಸಾರಿಗೆ ಸಂಸ್ಥೆಯ ಘಟಕದಲ್ಲಿರುವ ಕೆಲವರ ಉದಾರತೆಯಿಂದ ಅವಳಿಗೆ ದೈನಂದಿನ ಕನಿಷ್ಟ ಅವಶ್ಯಗಳು ಮಾತ್ರ ದೊರೆತವು. ದೈನಂದಿನ ಹಸಿವು, ನೀರಡಿಕೆ, ತುಂಡು ಬಟ್ಟೆ ದೊರೆತವಳಿಗೆ ಬಸ್ ಘಟಕದ ಆವರಣವೇ ವಾಸ ಸ್ಥಾನವಾಗಿತ್ತು. ಎಲ್ಲರ ಪಾಲಿಗೆ ಅವಳೊಬ್ಬ ಹುಚ್ಚಮ್ಮ. ಮ್ಯಾಡಮ್ಮ ಎಂದೇ ಸಂಭೋದಿಸುತ್ತಾಎಲ್ಲರೂ ಅವರವರ ಶಕ್ತ್ಯಾನುಸಾರ ಸಹಾಯ ಹಸ್ತ ನೀಡಿ ಅವಳನ್ನು ನೋಡಿಕೊಂಡು ಸಾಕಿದ್ದರು.

ನಾನೂ ಸಹ ಮನೆಯಿಂದ ತರುವ ಊಟ, ಉಪಹಾರಗಳಲ್ಲಿ ಆಗಾಗ ಭಾಗಿಯಾಗಿದ್ದಳು. ಸನ್ನೆಯಲ್ಲಿಯೇ ಅವಳೊಂದಿಗೆ ಸ್ಪಂದಿಸಿ ಅವಳ ವಿಚಾರ ತಿಳಿಯುವ ಪ್ರಯತ್ನ ನನ್ನದಾಗಿದ್ದರೂ ಸಹ ಅಷ್ಟೊಂದು ಸುಲಭ ಸಾಧ್ಯವಾದ ವಿಷಯವಾಗಿರಲಿಲ್ಲ. ಆದರೆ ನನ್ನ ಪ್ರಯತ್ನ ಮುಂದುವರಿದೇ ಇತ್ತು. ಅವಳಿಂದ ನನಗೆ ತಿಳಿದಿದ್ದು ಇಷ್ಟು. ಅವಳ ಬಾಲ್ಯ ಎಲ್ಲರಂತೆ ಉಲ್ಲಾಸದಾಯಕವಾಗಿಯೇ ಇತ್ತು. ಅವಳಿಗೆ ಅವಳ ತಂದೆ, ತಾಯಿಯ ಬಗ್ಗೆ ಸ್ಪಷ್ಟ ಮಾಹಿತಿಯಲ್ಲ. ಸಾಕಿದಂತಹ ತಾಯಿಯನ್ನು ಮಾತ್ರ ನೆಚ್ಚಿಕೊಂಡು ಬದುಕಿದ್ದಳು. ಸಾಕು ತಾಯಿಯಾದರೂ ಅಂತಹ ಸ್ಥಿತಿವಂತೆಯಲ್ಲ. ದುಡಿದು ಬದುಕುವ ಶ್ರಮ ಜೀವಿ. ದುಡಿಮೆಯ ಜತೆ ಕಸದ ತೊಟ್ಟಿಯಲ್ಲಿ ಸಿಕ್ಕ ಈ ಹುಡುಗಿಯನ್ನು ಸಾಕಿ, ಪೋಷಿಸಿದ್ದ ಉದಾರ ಮಾತೆಯವಳು. ಬೆಳಿತಾ ಬೆಳಿತಾ ಬಿದಿಗಿ ಚಂದ್ರನಂತೆ ಮೈದುಂಬಿಕೊಂಡ ಹುಡುಗಿಗೆ ಮದುವೆ ಮಾಡಿಕೊಡುವ ಅವಳ ಉದ್ದೇಶ ಈಡೇರದೇ ಅಪಘಾತದಲ್ಲಿ ತನ್ನ ಬದುಕಿನ ಅಂತಿಮ ಯಾತ್ರೆ ಮುಗಿಸಿದ್ದಳು. ನಂತರ ಇವಳ ಬದುಕು ಸೂತ್ರ ಕಿತ್ತ ಪಟದಂತಾಗಿತ್ತು. ಇವಳಿಗೆ ಗೊತ್ತಿರುವ ವಿಷಯ ಮನೆ ಕಸ ಮುಸುರೆ ಕೆಲಸ, ಬಟ್ಟೆ ತೊಳೆಯುವದು ಇತ್ಯಾದಿ. ತನ್ನ ಸಾಕು ತಾಯಿಯ ಅಗಲುವಿಕೆಯ ನಂತರ ತನಗೆ ತಿಳಿದ ಕೆಲಸವನ್ನೇ ಅವರಿವರ ಮನೆಯಲ್ಲಿ ಗೌರವವಾಗಿಯೇ ನಡೆಸಿದ್ದ ಈ ಅನಾಥ ಅಬಲೆಗೆ ಒಂದು ಕರಾಳ ದಿನದಂದು ಕೆಲಸ ಮಾಡುತ್ತಿರುವ ಮನೆಯ ಮಾಲೀಕನ ಕಾಮುಕ ಕಣ್ಣು ಹರಿದಾಡಿ ಏನೂ ಅರಿಯದ ಹುಡುಗಿಯ ಶೀಲ ಚಿಂದಿ ಚಿಂದಿಯಾಗಿತ್ತು. ಅಂದಿನಿಂದ ಅವಳೆಷ್ಟೇ ಪ್ರಯತ್ನಿಸಿದರೂ ಹೊರ ಜಗತ್ತು ಅವಳ ಸುಂದರ ದೇಹಸಿರಿಯನ್ನೇ ಬಯಸುವ ವಿಕೃತ ಕಾಮುಕ ಕಣ್ಣಿನಿಂದ ನೋಡಿತೇ ವಿನಹಃ ಅವಳ ಭಾವನೆ, ಅವಳ ಬಯಕೆ ಮತ್ತವಳ ವ್ಯಕ್ತಿತ್ವಕ್ಕೆ ಮನ್ನಣೆ ಕೊಡುವಂತಹ, ಗುರುತಿಸುವಂತಹ ಕನಿಷ್ಟ ಮಾತ್ರದ ಸೌಜನ್ಯ ಸಹ ತೋರಿಸಲಿಲ್ಲ. ಅವಳ ಕೆಲಸವೂ ಸಹ ಒಂದು ಮನೆಯಿಂದ ಮತ್ತೊಂದು ಮನೆಗೆ ಬದಲಾವಣೆಯಾಗುತ್ತಿರುವಂತೆಯೇ ಅವಳ ದೇಹವೂ ಒಬ್ಬರಿಂದೊಬ್ಬರಿಗೆ ಅರ್ಪಿತವಾಗುತ್ತ ಗಿರಗಿರನೇ ತಿರುಗುತ್ತಿತ್ತು.

ಹೀಗಿರುವಾಗ ಒಬ್ಬ ಮಾತ್ರ ಅವಳ ಚಾರಿತ್ರ್ಯವನ್ನು ಪರಿಗಣಿಸದೇ ಮದುವೆಯಾಗಲು ಬಯಸಿದ್ದ. ಅವನೂ ಸಹ ಒಬ್ಬ ಅನಾಥ. ಅನಾಥನಿಗೆ ಅನಾಥನಲ್ಲದೇ ಈ ಜಗದಲ್ಲಿ ಯಾವ ನಾಥ ಸಿಗಬಲ್ಲ? ಅವಳೂ ಸಹ ಅಸಹಾಯಕತೆಯಿಂದ ಗಿಡಕ್ಕೆ ಬಳ್ಳಿ ಆಸರೆಯಾಗುವಂತೆ ಅವನಿಗೆ ಆಸರೆಯಾಗಿ ಊರ ಮುಂದಿನ ನಿರ್ಜನ ಗುಡಿಯೊಳಗೆ ಅಲ್ಲಿಯೇ ಸಿಕ್ಕ ಹೂವುಗಳನ್ನು ಹಾರ ಮಾಡಿಕೊಂಡು ಬದಲಾಯಿಸಿ, ಆ ಗುಡಿಯೊಳಗೇ ಅಂದಿನ ಹೊಸ ಪ್ರಥಮ ರಾತ್ರಿ ಪೂರೈಸಿ ನವ ದಂಪತಿಗಳಾದರು. ಅಂದಿನಿಂದ ಇಬ್ಬರೂ ದುಡಿದು ಬದುಕಿನ ಬಂಡಿ ಸಾಗಿಸಿದರಾದರೂ ಈ ಆನಂದ ಅವರ ಪಾಲಿಗೆ ಬಹುದಿನ ಮುಂದುವರೆಯಲಿಲ್ಲ. ಅದು ಅವಳ ದುರದೃಷ್ಟವೇ ಎನ್ನಬೇಕು. ಅವಳ ಸಂಗಾತಿ ಅವಳನ್ನ ತನ್ನ ಪರಿಚಯಸ್ತರಿಗೆ ಪರಿಚಯಿಸಿ ಅವಳ ದೇಹ ಮಾರಾಟಕ್ಕೆ ತಾನಾಗಿಯೇ ಅವಕಾಶ ಕಲ್ಪಿಸಿ ಧನ ಸಹಾಯ ಪಡೆಯಲು ಆರಂಭಿಸಿದ. ನಂತರದ ದಿನಗಳಲ್ಲಿ ಪರಿಚಯದವರ ಸಂಪರ್ಕ ಸಂಖ್ಯೆ ಗುಣಾಕಾರ ಮಾದರಿಯಲ್ಲಿ ವಿಸ್ತರಿಸಿತ್ತು. ಅವಳನ್ನಿಟ್ಟುಕೊಂಡು ಗಿರಾಕಿಗಳನ್ನು ಹುಡುಕುವುದು ಅವನ ಕೆಲಸವಾಯಿತು. ಅವಳಿಗೆ ಈ ಘೋರ ಬದುಕು ಅಸಹನೀಯವಾಗಿತ್ತು. ಇದರಿಂದ ತನ್ನ ಬದುಕಿನ ದಿಕ್ಕನ್ನು ಬದಲಾಯಿಸಿಕೊಳ್ಳುವ ಇವಳ ಉತ್ಸಾಹ ಕಮರಿತು. ಅವನ ಹಣದ ದಾಹ ಹೆಚ್ಚಿತು. ಪ್ರತಿದಿನ ಸೆರಗು ಹಾಸುವ ಇವಳ ಕೆಲಸಕ್ಕೆ ಪತಿಯೇ ಒತ್ತಾಯಿಸುವ ಹಂತಕ್ಕೆ ಬಂದಾಗ ಇವಳು ಮಾನಸಿಕ ಸ್ವಾಸ್ತ್ಯ ಕಳೆದುಕೊಳ್ಳುವ ಹಂತಕ್ಕೆ ಬಂದಳು. ಈ ಕಾರಣಕ್ಕಾಗಿ ಒಂದುದಿನ ಇಬ್ಬರಲ್ಲಿ ವಾಗ್ವಾದ ನಡೆಯಿತು. ಅಂದು ರಾತ್ರಿ ಇವಳಿಗಾಗಿ ಬಂದ ಗಿರಾಕಿಯಲ್ಲೊಬ್ಬ ತೀರಾ ಅನಾಗರಿಕನಂತೆ ಕಂಡ, ಆಗಿವಳು ಜೋರಾಗಿ ಕಿರುಚಿ ಬಂದವನ ಅಂಗಿ ಲುಂಗಿ ಕಿತ್ತಾಡಿ ತಲೆ ಕೆರೆದು ಕೊಂಡು ವಿಕಾರವಾಗಿ ನಕ್ಕಳು, ಜೋರಾಗಿ ಅತ್ತಳು, ಮೈಕೈ ಪರಚಿ ಕೊಂಡಳು. ಹೊರ ಜಗತ್ತಿಗೆ ಅವಳು ಹುಚ್ಚಿಯೆಂದು ಕಂಡಳು. ಆ ಕ್ಷಣವೇ ತಾನೇ ಮಾಡಿಕೊಂಡ ಪತಿಯನ್ನ, ಅಲ್ಲಿಯ ಪರಿಸರವನ್ನು ಬಿಟ್ಟು ಓಡಿದಳು, ನಡೆದಳು, ಮತ್ತೆ ಓಡಿದಳು, ಓಡಿ ಓಡಿ ನಡೆದಳು, ಸಾಗಿದಳು, ತೆವಳಿದಳು. ತಾನು ಎಲ್ಲಿಂದ ಎಲ್ಲಿಯವರೆಗೆ ಬಂದೆನೆಂಬ ಅರಿವಿಲ್ಲದಂತೆ ಸಾಗಿದಳು. ಸಿಕ್ಕ ಯಾವುದೋ ಲಾರಿಯನ್ನ ಏರಿ ಅದರ ಚಾಲಕನಿಗೆ ತಿಳಿಯದಂತೆ ಪಯಣಿಸಿದಳು. ಒಂದು ರಾತ್ರಿ ಚಾಲಕ ವಿಶ್ರಾಂತಿಗೆಂದು ರಸ್ತೆ ಬದಿ ಲಾರಿ ನಿಲ್ಲಿಸಿ ವಿಕ್ಷೀಸಿದಾಗ ಇವಳು ಕಣ್ಣಿಗೆ ಬಿದ್ದಳು. ಅಲ್ಲಿಯೇ ಇವಳನ್ನು ಇಳಿಸಿ ತನ್ನ ಲಾರಿ ಮುಂದೆ ಸಾಗಿಸಿಕೊಂಡು ತೆರಳಿದ.

ಅವಳು ಅಂದು ಇಳಿದ ಸ್ಥಳವೇ ಬಹುಶಃ ಈ ಬಸ್ ಘಟಕದ ಪಕ್ಕದಲ್ಲಿಯ ರಸ್ತೆಯಾಗಿರಬಹುದೆಂದು ನಾನಂದುಕೊಂಡೆ. ಇಷ್ಟೆಲ್ಲವನ್ನ ಅವಳು ತನ್ನ ಅಸ್ಪಷ್ಟ ಮಾತುಗಳಿಂದ, ವರ್ತನೆಯಿಂದ ತನ್ನದೇ ಶೈಲಿಯಲ್ಲಿ ಹೇಳಿದವಳು. ಆ ಕಾರಣಕ್ಕಾಗಿ ಅವಳು ನನಗೆ ಹುಚ್ಚಿಯೆನಿಸಲಿಲ್ಲ. ಅಂದಿನಿಂದ ನಾನವಳಿಗಿಟ್ಟ ಹೆಸರು...

ಮಾನಸಿ.

ಅಂದಿನಿಂದ ಅವಳನ್ನು ಗಮನಿಸುತ್ತಿದ್ದ ನನಗೆ ನಮ್ಮ ಘಟಕದವರು ಮಾನವೀಯತೆಯಿಂದ ವರ್ತಿಸಿದ ವಿಧಾನ ನನಗೆ ತುಂಬಾ ಹಿಡಿಸಿತು. ಹೀಗಿರುವಾಗ ಕೆಲವು ತಿಂಗಳುಗಳ ಹಿಂದೆ ಅವಳ ಹೊಟ್ಟೆ ಉಬ್ಬಿದ್ದು ಕಾಣಿಸಿತು! ಆಗ ನಾನು ಮತ್ತು ನನ್ನ ಸಹಚರರು ಕೂಡಿ ಸ್ಥಳೀಯ ವೈದ್ಯರಲ್ಲಿ ಪರೀಕ್ಷಿಸಿದಾಗ ಬಸಿರು ಎಂದು ತಿಳಿದು ನಿಜಕ್ಕೂ ನಮಗೆಲ್ಲಾ ಆಘಾತವಾಗಿತ್ತು. ಅದೇ ವೈದ್ಯರಲ್ಲಿ ಅವಳ ಬಸಿರನ್ನು ತೆಗೆಸಿದೆವು. ಅವಳ ಸ್ನಾನ ಸಹ ವಾರಕ್ಕೊಮ್ಮೆ ನಮ್ಮ ಘಟಕದ ಕೆಲವು ಮಹಿಳಾ ಸಿಬ್ಬಂದಿಯವರೇ ಮಾಡಿಸುತ್ತಿದ್ದರು. ಅಂತೂ ಇಂತೂ ಅವಳ ಬದುಕು ನಮ್ಮ ಬಸ್ ಘಟಕ ಹಾಗೂ ಸಿಬ್ಬಂದಿಯವರ ಮಾನವೀಯ ಸಹಾಯ ಹಸ್ತದಿಂದ ಸುಗಮವಾಗಿ ಸಾಗಿತ್ತಾದರೂ ಅವಳಲ್ಲಿಯ ಬದುಕಿ ಬಾಳುವ ಹಠ ನನಗೂ ಹಿಡಿಸಿತ್ತು. ಆದರೆ ನಿನ್ನೆ ಮಾತ್ರ ಅವಳ ಮೇಲೆ ಯಾವುನೋ ಆಗಂತುಕ ಮಾಡಿದ ದೈಹಿಕ ಹಲ್ಲೆಯಿಂದ ಅವಳ ಪಾಲಿಗೆ ಅವನು ಕೊನೆಯ ಗಿರಾಕಿಯಾಗಿದ್ದ. ಬಹುಶ: ತನ್ನ ವ್ಯಕ್ತಿತ್ವವನ್ನ ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಅವಳು ಅವನ ವರ್ತನೆಯನ್ನು ಭಯಂಕರವಾಗಿ ಪ್ರತಿರೋಧಿಸಿ ಪ್ರತಿಭಟಿಸಿರಬೇಕು. ಆ ಕಾರಣಕ್ಕಾಗಿ ದೈಹಿಕವಾಗಿ ಅವನಿಂದ ಅವಳು ಜರ್ಜರಿತವಾಗಿದ್ದಳು. ಅವಳ ಅಂತ್ಯ ಈ ರೀತಿ ಹೀನಾಯವಾಗುವುದೆಂದು ನಾವು ಅಂದುಕೊಂಡಿರಲಿಲ್ಲ. ಎಷ್ಟೇ ಪ್ರಯತ್ನಿಸಿದರೂ ಅವಳ ಬದುಕಿನ ಅಂತ್ಯವನ್ನು ಇಷ್ಟು ಬೇಗ ಕಾಣುವಂತಾಯಿತಲ್ಲವೆಂದು ನಮ್ಮ ಮನ ಮಮ್ಮಲ ಮರುಗಿತ್ತು. ಅವಳನ್ನ ನಮ್ಮ ಬಸ್ ಘಟಕದ ಹೊರ ಆವರಣ ಗೋಡೆಯ ಬದಿಯಲ್ಲಿ ಬದುಕಲು ಬಿಟ್ಟಿದ್ದು ತಪ್ಪೇ? ಯಾರಾದರೂ ಸಹೃದಯ ವಿಶಾಲ ಮನೋಭಾವದವರು ತಮ್ಮ ಮನೆಯ ಯಾವುದೋ ಹೊರ ಮೂಲೆಯಲ್ಲಿಯಾದರೂ ಬದುಕಲು ಅವಕಾಶ ಕೊಡಬಹುದಿತ್ತಲ್ಲ? ಅವಳು ಬದುಕಿದ್ದಾಗ ಅವಳಿಗಾಸರೆಯಾಗಿ ನಿಲ್ಲಲು ನನಗೂ ಆಗಲಿಲ್ಲವೆಂದ ಮೇಲೆ ಇನ್ನೊಬ್ಬರನ್ನಾಗಲೀ, ವ್ಯವಸ್ಥೆಯನ್ನಾಗಲೀ ದೂಷಿಸುವ, ಹಳಿಯುವ ನೈತಿಕ ಹಕ್ಕು ನನಗಿದೆಯೇ?